## ಕರ್ನಾಟಕ ವಿಧಾನ ಪರಿಷತ್ತು
## 135ನೇ ಅಧಿವೇಶನ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 113
ಸದಸ್ಯರ ಹೆಸರು: ಶ್ರೀ. ಎಸ್.ನಾಗರಾಜ್ (ಸಂದೇಶ ನಾಗರಾಜ್), (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ: 10-07-2018
ಉತ್ತರಿಸುವ ಸಚಿವರು: ಮಾನ್ಯ ಲೋಕೋಪಯೋಗಿ ಸಚಿವರು

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕೊಳ್ಳೇಗಾಲ-ಹನೂರು ರಾಜ್ಯ ಹೆದ್ದಾರಿ ದುರಸ್ಥಿಗೊಂಡ ಅಲ್ಪ ಅವಧಿಯಲ್ಲಿಯೇ ಮಳೆಗೆ ಕೊಚ್ಚಿ ಹೋಗಿ ಹೊಂಡಗಳಿಂದ ತುಂಬಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ರಸ್ತೆಯು ಇತ್ತೀಚೆಗೆ ದುರಸ್ಥಿ ಆಗಿದ್ದು ಯಾವಾಗ; ರಸ್ತೆಯ ದುರಸ್ಥಿಗೆ ವೆಚ್ಚವಾದ ಹಣ ಎಷ್ಟು; | ಸರ್ಕಾರದ ಗಮನಕ್ಕೆ ಬಂದಿರುತ್ತದೆ<br><br>• ಕೊಳ್ಳೇಗಾಲದಿಂದ ಹನೂರುವರೆಗಿನ ರಾಜ್ಯ ಹೆದ್ದಾರಿಯು ಒಟ್ಟು 24.10 ಕಿ.ಮೀ. ಉದ್ದವಿರುತ್ತದೆ. ಇದರಲ್ಲಿ 1) ಕೊಳ್ಳೇಗಾಲ-ಹನೂರು ಘಾಟ್ ರಸ್ತೆ ಸ.0.00 ಯಿಂದ 5.50ಕಿ.ಮೀ.ವರೆಗೆ 5.50ಕಿ.ಮೀ. ಹಾಗೂ 2) ಶ್ರೀರಂಗಪಟ್ಟಣ-ಮಲೈಮಹದೇಶ್ವರ ಬೆಟ್ಟದ ರಸ್ತೆಯ ಸ.67.00 ರಿಂದ 85.60 ಕಿಮೀ.ವರೆಗೆ 18.60 ಕಿ.ಮೀ. ಉದ್ದವಿರುತ್ತದೆ. ಸದರಿ ರಸ್ತೆಯಲ್ಲಿ ಇತ್ತೀಚೆಗೆ ಯಾವುದೇ ದುರಸ್ಥಿ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ. ಆದರೆ 2017-18 ನೇ ಸಾಲಿನಲ್ಲಿ ಕೊಳ್ಳೇಗಾಲ-ಹನೂರು ವರೆಗಿನ ಎಸ್.ಹೆಚ್-38 ಹಾಗೂ ಶ್ರೀರಂಗಪಟ್ಟಣ-ಮಲೈಮಹದೇಶ್ವರ ಬೆಟ್ಟದ ರಸ್ತೆಯ ಎಸ್.ಹೆಚ್-79 ರವರೆಗೆ ಒಟ್ಟು 24.10 ಕಿ.ಮೀ. ರಸ್ತೆಗೆ ರೂ.56.30 ಲಕ್ಷಗಳ ಅನುದಾನವನ್ನು ನಿರ್ವಹಣೆಗಾಗಿ ವೆಚ್ಚ ಮಾಡಲಾಗಿರುತ್ತದೆ.<br><br>• ಇತ್ತೀಚಿನ ಸತತ ಮಳೆಯಿಂದಾಗಿ ರಸ್ತೆಗಳಲ್ಲಿ ಗುಂಡಿಗಳುಂಟಾಗಿದ್ದು, ಗುಂಡಿಗಳನ್ನು ಮುಚ್ಚುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ. ಪ್ರತಿ ಮಳೆಗಾಲದಲ್ಲಿಯೂ ರಸ್ತೆಯಲ್ಲಿ ಉಂಟಾಗುವ ಗುಂಡಿಗಳನ್ನು ಮುಚ್ಚುವ ಪ್ರಕ್ರಿಯೆ ನಡೆಯುತ್ತಲಿರುತ್ತದೆ. |
| ಆ) | ಕೂಡಲೇ ಈ ರಸ್ತೆಯ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ಜರುಗಿಸಲಾಗುವುದೇ; | • ಪ್ರಸ್ತುತ ಸಾಲಿನಲ್ಲಿ ಕೊಳ್ಳೇಗಾಲ-ಹನೂರು ಘಾಟ್ ರಸ್ತೆ ಎಸ್.ಹೆಚ್-38ರ ಸ.0.00 ಯಿಂದ 5.50ಕಿ.ಮೀ. ವರೆಗೆ ರಸ್ತೆಯನ್ನು ಮುಂಗಾರು ಪೂರ್ವ ದಿನಗಳ ನಿರ್ವಹಣೆಯನ್ನು ಕೈಗೊಳ್ಳಲು ಅಂದಾಜು ಮೊತ್ತ ರೂ.0.64ಲಕ್ಷಗಳಿಗೆ ಅಂದಾಜು ಪಟ್ಟಿಯು ಅನುಮೋದನೆಗೊಂಡಿರುತ್ತದೆ. ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಗುತ್ತಿಗೆದಾರರನ್ನು ನೇಮಿಸಿದ ಕೂಡಲೇ ಗುಂಡಿ ಮುಚ್ಚುವ ಕಾಮಗಾರಿಯನ್ನು ತುರ್ತಾಗಿ ಕೈಗೊಂಡು ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿ ಕೊಡಲಾಗುವುದು. |

| | | |
|---|---|---|
| | | • ಪ್ರಸ್ತುತ ಸಾಲಿನಲ್ಲಿ ಶ್ರೀರಂಗಪಟ್ಟಣ-ಮಲೈಮಹದೇಶ್ವರ ಬೆಟ್ಟದ ರಾಜ್ಯ ಹೆದ್ದಾರಿ -79ರ ಕಿ.ಮೀ 67.00 ರಿಂದ 85.60 ಕಿಮೀ.ವರೆಗೆ ರಸ್ತೆಯನ್ನು ಮುಂಗಾರು ಪೂರ್ವ ದಿನಗಳ ನಿರ್ವಹಣೆಯನ್ನು ಕೈಗೊಳ್ಳಲು ಸದರಿ ರಸ್ತೆಗೆ ರೂ.4.65ಲಕ್ಷಗಳು ಅನುಮೋದನೆ ಯಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಗುತ್ತಿಗೆದಾರರನ್ನು ನೇಮಿಸಿದ ಕೂಡಲೇ ಗುಂಡಿ ಮುಚ್ಚುವ ಕಾಮಗಾರಿಯನ್ನು ತುರ್ತಾಗಿ ಕೈಗೊಂಡು ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲು ಕ್ರಮ ವಹಿಸಲಾಗುತ್ತಿದೆ. |
| ಇ) | ಹನೂರು-ಮಹದೇಶ್ವರ ಬೆಟ್ಟ ರಸ್ತೆಯೂ ಕೂಡ ಹೊಂಡ ಗುಂಡಿಗಳಿಂದ ಕೂಡಿದ್ದು, ಕೂಡಲೇ ಈ ಗುಂಡಿಗಳನ್ನು ಮುಚ್ಚುವ ಕಾಮಗಾರಿ ಕೈಗೊಂಡು ರಸ್ತೆಯನ್ನು ಸರಿಪಡಿಸಲಾಗುವುದೇ; | ಹನೂರು-ಮಹದೇಶ್ವರ ಬೆಟ್ಟ ರಸ್ತೆಯ ಕಿ.ಮೀ 85.60 ರಿಂದ 163.59 ಕಿ.ಮೀ ವರೆಗಿನ ಒಟ್ಟು ಉದ್ದ 77.90 ಕಿ.ಮಿ. ಇದ್ದು, ಸದರಿ ರಸ್ತೆಯ ಒಟ್ಟು 8.90 ಕಿ.ಮೀ. ಉದ್ದವನ್ನು ಅಭಿವೃದ್ಧಿಪಡಿಸಲು ರೂ. 10.00 ಕೋಟಿ ಅಂದಾಜು ವೆಚ್ಚದಲ್ಲಿ ಈ ಕೆಳಗಿನ ಎರಡು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.<br><br>1) ಕೊಳ್ಳೇಗಾಲ ತಾಲ್ಲೂಕು ಶ್ರೀರಂಗಪಟ್ಟಣ-ಮಲೈ ಮಹದೇಶ್ವರಬೆಟ್ಟ ರಸ್ತೆ ಸ.92.29 ರಿಂದ 115.29 ಕಿ.ಮೀವರೆಗೆ ಆಯ್ದಭಾಗಗಳಲ್ಲಿ ಮರು ಡಾಂಬರೀಕರಣ (ಸ.92.29 ಕಿ.ಮೀ ರಿಂದ 94.21 ಕಿ.ಮೀ ವರೆಗೆ ಕಾಮಗಾರಿಯನ್ನು ನಿರ್ವಹಿಸಲಾಗಿದೆ, ಒಟ್ಟು ಉದ್ದ 1.92 ಕಿ.ಮೀ) ಕಾಮಗಾರಿಯು ರೂ.200.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಮಂಜೂರಾಗಿದ್ದು, ಪ್ರಸ್ತುತ ಕಾಮಗಾರಿ ಪೂರ್ಣಗೊಂಡಿರುತ್ತದೆ.<br><br>2) ಕೊಳ್ಳೇಗಾಲ ತಾ॥ ಹನೂರು-ಅಜ್ಜಿಪುರ-ರಾಮಾಪುರ-ಕೌದಳ್ಳಿ ರಸ್ತೆ ಸ.92.00 ರಿಂದ 97.00 ಕಿ.ಮೀ. ಹಾಗೂ 100.00 ರಿಂದ 104.00 ಕಿ.ಮೀವರೆಗೆ ರಸ್ತೆ ಅಭಿವೃದ್ಧಿ (ರ.ಸ.94.21 ಕಿ.ಮೀ ರಿಂದ 97.19 ಕಿ.ಮೀ ಹಾಗೂ 99.50 ರಿಂದ 103.50 ಕಿ.ಮೀ ವರೆಗೆ ಒಟ್ಟು ಉದ್ದ 6.98) ಕಾಮಗಾರಿಯನ್ನು ರೂ.800.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಕಾಮಗಾರಿಯು ಮಂಜೂರಾಗಿದ್ದು, ಪ್ರಸ್ತುತ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಸದರಿ ರಸ್ತೆಯ 3.88 ಕಿ.ಮೀ ಉದ್ದವು ನಿರ್ವಹಣೆ ಅಡಿಯಲ್ಲಿ ಇರುತ್ತದೆ.<br><br>ಉಳಿದ 59.09 ಕಿ.ಮೀ. ಉದ್ದದ ರಸ್ತೆಯನ್ನು ಮುಂಗಾರು ಪೂರ್ವ ರಸ್ತೆ ನಿರ್ವಹಣೆ ಅಡಿ ರೂ.9.00 ಲಕ್ಷಗಳಿಗೆ ಅನುಮೋದನೆಯಾಗಿದ್ದು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಗುತ್ತಿಗೆದಾರರನ್ನು ನೇಮಿಸಿದ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಿ ರಸ್ತೆ ನಿರ್ವಹಣೆಯನ್ನು ಕೈಗೊಳ್ಳಲಾಗುವುದು. |

ಲೋಇ 60 ಸಿಕ್ಯೂಎನ್ 2018

(ಹೆಚ್.ಡಿ. ರೇವಣ್ಣ)
ಲೋಕೋಪಯೋಗಿ ಸಚಿವರು